ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 105-110
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸಿಂಧನೂರು ತಾಲೂಕಿನ ತುರುಗೊಳ್ ವೀರಗಲ್ಲುಗಳು

**ಕರಿಯಪ್ಪ**
ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
*ಎಡದೊರೆ ನಾಡು ಮತ್ತು ದೋ-ಅಬ್ ಪ್ರದೇಶವೆಂದು ಪ್ರಸಿದ್ಧವಾದ ಜಿಲ್ಲೆ ರಾಯಚೂರು. ಈ ಭಾಗದಲ್ಲಿ ಅತೀ ಹೆಚ್ಚಾಗಿ ಆಳ್ವಿಕೆ ಮಾಡಿದ ಕೀರ್ತಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ವಿಜಯನಗರ ಮತ್ತು ಪಾಳೆಗಾರರಿಗೆ ಸಲ್ಲುತ್ತದೆ. ಈ ಮನೆತನಗಳು ತಮ್ಮದೆ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಕೃಷ್ಣ ಮತ್ತು ತುಂಗಭದ್ರ ನದಿಗಳ ನಡುವಿನ ಫಲವತ್ತತೆಯ ಪ್ರದೇಶಕ್ಕಾಗಿ ಅನೇಕ ಯುದ್ಧಗಳು ಮತ್ತು ಹೋರಾಟಗಳು ನಡೆದಿರುವ ಬಗ್ಗೆ ಮಾಹಿತಿ ದೊರೆಯುತ್ತದೆ. ಇವುಗಳಿಗೆ ಸಾಕ್ಷಿಯಾದಂತೆ ರಾಯಚೂರು ಜಿಲ್ಲೆಯ ತುಂಬೆಲ್ಲಾ ವೀರಗಲ್ಲು ಕಂಡುಬರುತ್ತವೆ. ಸಿಂಧನೂರು ತಾಲೂಕು ಕೂಡ ಈ ನಿದರ್ಶನಕ್ಕೆ ಹೊರತಾಗಿಲ್ಲ ಎಂದು ಹೇಳಬಹುದು. ವೀರಗಲ್ಲುಗಳ ವಿವಿಧ ಬಗೆಗಳಲ್ಲಿ ತುರುಗೋಳ್ ವೀರಗಲ್ಲುಗಳು ಕೂಡ ಒಂದಾಗಿದೆ. ಈ ಲೇಖನದಲ್ಲಿ ಸಿಂಧನೂರು ತಾಲೂಕಿನಲ್ಲಿ ಕಂಡುಬರುವ ತುರುಗೊಳ್ ವೀರಗಲ್ಲುಗಳ ಬಗ್ಗೆ ವಿವರಿಸಲಾಗಿದೆ.*

***Keywords:*** *ವೀರಗಲ್ಲುಗಳು, ತುರುಗೊಳ್ ವೀರಗಲ್ಲುಗಳು, ಸಿಂಧನೂರು, ಗೋವು, ಎಮ್ಮೆ.*

**ಪೀಠಿಕೆ**

ಸಾಮಾನ್ಯವಾಗಿ ತುರುಗೊಳ್ ಎಂದರೆ ಗೋವುಗಳು/ಹಸುಗಳು ಮಾತ್ರ ಎನ್ನುವುದು ಸಾಮಾನ್ಯ ಜನರ ಅಭಿಪ್ರಾಯವಾಗಿದೆ. ಆದರೆ ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ತುರುಗೋಳು ಎಂದರೆ ಹಸುಗಳು, ಎತ್ತುಗಳು ಹಾಗೂ ಎಮ್ಮೆಗಳು. ಗೋವುಗಳು ಅಂದಿನ ಕಾಲದ ರಾಜ್ಯದ ಆರ್ಥಿಕ ಸಂಪತ್ತನ್ನು ಹಾಗೂ ರಾಜನ ಉನ್ನತ ಸ್ಥಾನವನ್ನು ತೋರಿಸುತ್ತಿದ್ದವು. ಪ್ರಾಚೀನ ಕರ್ನಾಟಕದ ಯುದ್ಧಗಳಲ್ಲಿ ತುರುಗೊಳ್ ಬಹಳ ಪ್ರಸಿದ್ಧವಾದ ಯುದ್ಧವಾಗಿತ್ತು. ಪ್ರತಿವೀರರು ಅಥವ ಕಳ್ಳರು ಒಂದು ಗ್ರಾಮ/ಒಬ್ಬ ವ್ಯಕ್ತಿಯ ದನಗಳನ್ನು ಅಪಹರಿಸುವ ಘಟನೆಗೆ ತುರುಗೊಳ್ ಎಂದು ಕರೆಯಲಾಗಿದೆ. ಘಟನೆಯಷ್ಟೇ ಅಲ್ಲದೆ ಈ ಕಾರಣಕ್ಕೆ ನಡೆಯುವ ಯುದ್ಧವನ್ನು ಅಥವಾ ಸಂಘರ್ಷವನ್ನು ತುರುಗೊಳ್ ಎಂದು ಕರೆಯಲಾಗಿದೆ. ತುರು ಕೊಳ್ ಅಂದರೆ ಆಕಳಗಳನ್ನು ತೆಗೆದುಕೊ, ಹಿಡಿದುಕೊ ಎಂದು ಅರ್ಥವಾಗುತ್ತದೆ. ಇಂತಹ ಸಮಯದಲ್ಲಿ ತುರುಗಳ ರಕ್ಷಣೆಗೆ ಹೋರಾಡದವನು ಹೇಡಿಯೆನಿಕೊಳ್ಳುತ್ತಿದ್ದನು. ಕನ್ನಡದ ಕವಿ ರನ್ನ ತನ್ನ ಗದಾಯುದ್ಧ ಕಾವ್ಯದಲ್ಲಿ

***ತುರುಗೋಳೊಳ್ ಪೆಣ್ಬುಯಲೊ***
***ಳೆರೆವೆಸದೊಳ್ ನಂಟನೆಡರೊಳರರೆವಿನೊಳಂ॥***
***ತರೆಸಂದು ಗಂಡುತನಮನೆ***
***ಮನೆಪದವಂ ಗಂಡನಲ್ಲನೆಂತುಂ ಷಂಡಂ॥***

***Please cite this article as:*** ಕರಿಯಪ್ಪ. (2023). ಸಿಂಧನೂರು ತಾಲೂಕಿನ ತುರುಗೊಳ್ ವೀರಗಲ್ಲುಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 105–110.

ಎಂದು ಹೇಳಿರುವನು. ಮೂರು ಕಾರಣಗಳಿಂದ ತುರುಗಾಳಗವು ಮಹತ್ವವನ್ನು ಪಡೆದುಕೊಂಡಿದೆಂದು ವಿದ್ವಾಂಸರು ಹೇಳುತ್ತಾರೆ. ಮೊದನೆಯದು ಗೋವು ಪೂಜನೀಯವಾದುದು. ಎರಡನೆಯದಾಗಿ ಅದು ಕಳೆದುಕೊಳ್ಳಲಾಗದ ಆಸ್ತಿ. ಮೂರನೆಯದಾಗಿ ಅವುಗಳನ್ನು ಕಳೆದುಕೊಳ್ಳುದರಲ್ಲಿ ಒಂದು ಗ್ರಾಮದ ವ್ಯಕ್ತಿಯ ಮಾನದ ಪ್ರಶ್ನೆಯೂ ಇದೆ.

ದನ–ಕರುಗಳು ಪ್ರಚೀನ ಕಾಲದಿಂದೂ ಮಾನವನಿಗೆ ಸಹಾಯಕ ಜೀವಿಗಳಾಗಿವೆ. ಅಲ್ಲದೆ ನಮ್ಮ ಮೂಲ ಕಸುಬು ವ್ಯವಸಾಯವಾದ್ದರಿಂದ ಪಶುಗಳು ನಮಗೆ ಅತ್ಯವಶ್ಯಕ ಸಾಧನವಾಗಿದ್ದವು. ಪಶುಗಳಿಲ್ಲದ ಗ್ರಾಮೀಣ ಬದುಕು ಇಲ್ಲವಾದಂತೆಯೇ ಸರಿ. ಅವರ ಆರ್ಥಿಕ ಮೂಲಗಳು ಪಶುಗಳಾಗಿದ್ದವು. ಇಂದಿಗೂ ಗ್ರಾಮೀಣ ಭಾಗದಲ್ಲಿ ಬಹಳಷ್ಟು ಕುಟುಂಬಗಳು ಪಶುಗಳನ್ನೆ ಅವಲಂಬಿಸಿವೆ. ಇಂತಹ ಪಶುಗಳನ್ನು ಪ್ರಾಚೀನ ಕಾಲದಲ್ಲಿ ಸಂಪತ್ತಿನಲ್ಲಿ ಒಂದೆಂದು ಪರಿಗಣಿಸಲಾಗಿತ್ತು. ಎತ್ತುಗಳು ಕೃಷಿ ಚಟುವಟಿಕೆಗೆ, ಸರಕು ಸಾಗಾಣಿಕೆಗೆ ಮುಖ್ಯವಾದರೆ, ಆಕಳುಗಳು ಮುಖ್ಯ ಆಹಾರಗಳಲ್ಲಿ ಒಂದಾದ ಹಾಲಿಗೆ ಮುಖ್ಯವಾಗಿದ್ದವು. ಇದರ ಪರಿಣಾಮವಾಗಿ ಇವುಗಳ ಪಾಲನೆ ಪೋಷಣೆಯ ಅಗತ್ಯತೆಯೊಂದಿಗೆ ಇವುಗಳ ರಕ್ಷಣೆಯೂ ಬಹಳ ಮುಖ್ಯವಾಯಿತು. ಪಶುಪಾಲನೆ ಆರ್ಥಿಕ ಮೂಲದ ಮುಖ್ಯ ಒರತೆಯಾದಂತೆ ಅವುಗಳನ್ನು ಕದಿಯುವ, ಅಪಹರಿಸುವ ಪ್ರವೃತ್ತಿ ಹೆಚ್ಚಾಗತೊಡಗಿತು. ಇದಕ್ಕಾಗಿ ದನಗಳ ರಕ್ಷಣೆಗಾಗಿ ಅನೇಕ ಯುವಕರು ಗ್ರಾಮಗಳಲ್ಲಿ ಸದಾಕಾಲ ಜಾಗೃತರಾಗಿರುತ್ತಿದ್ದರು. ಪ್ರಾಣ ಕೊಟ್ಟರೂ ಸರಿ ತುರುಗಳನ್ನು ಅಪಹರಿಸಲು ಬಿಡುವುದಿಲ್ಲವೆಂಬ ವೀರರು ಒಂದು ಕಡೆಯಾದರೆ, ಪ್ರಾಣ ಹೋದರು ಸರಿ ಅವರ ತುರುಗಳನ್ನು ಅಪಹರಿಸಲೇಬೇಕೆಂಬ ಪ್ರತಿವೀರರು ಮತ್ತೊಂದು ಕಡೆ. ಈ ಇಬ್ಬರು ಹೋರಾಟದಲ್ಲಿ ಅಪಾಯಕ್ಕೊಳಗಾಗುತ್ತಿದ್ದುದು ದನ–ಕರುಗಳು ಮತ್ತು ಹೋರಾಟದಲ್ಲಿ ಮಡಿದವರ ಹೆಂಡತಿ ಮಕ್ಕಳು ಹಾಗೂ ಕುಟುಂಬದವರು.

'ತುರುಗೋಳ್' ಬಗ್ಗೆ ಡಾ.ಎಂ.ಎಂ. ಕಲಬುರ್ಗಿಯವರು ಬರೆಯುತ್ತ "ಗೋವು ಪ್ರಾಚೀನ ಭಾರತೀಯರಿಗೆ ವಿನಿಮಯದ ಪ್ರಧಾನ ವಸ್ತುವಾಗಿದ್ದಿತು. ಆಗ ಒಂದು ಆಕಳ ಬೆಲೆ ಪರಮೋಚ್ಚ ನಾಣ್ಯವಾದ ಒಂದು ಸುವರ್ಣಕ್ಕೆ ಸಮಾನ ಈ ಕಾರಣದಿಂದಲೇ ಸಂಪತ್ತಿನ ಸಾಲಿನಲ್ಲಿ ಗೋಧನವೂ ಪರಿಗಣಿತವಾಯಿತು. ಪಂಪಭಾರತದ ಕೊಡುವ ಬಾಡಕ್ಕಂ ಜೀವಧನಂಗಳ್ಗಂ ಬಿಡುವೆಣ್ಗಂ ಲೆಕ್ಕಮಿಲ್ಲ' ಎಂಬ ಮಾತಿನಲ್ಲಿಯ ಜೀವಧನ ಎಂಬುದಕ್ಕೆ ಆಕಳು ಎಂದೇ ಅರ್ಥ ಹೀಗೆ ಮೌಲಿಕವೆನಿಸಿದ ಆಕಳು ಸ್ವಾಭಾವಿಕವಾಗಿ ಕ್ರಮೇಣ ಪೂಜ್ಯತೆಯನ್ನು ಪಡೆದಾಗ ಅದರ ಬಗ್ಗೆ ಭಾರತೀಯನ ಭಾವನೆ ತುಂಬ ಪವಿತ್ರವಾಯಿತು. ಇದರ ಸೆರೆ ಲೌಕಿಕವಾಗಿ ದೊಡ್ಡ ಹಾನಿಯೆನಿಸಿದರೆ, ಸೆರೆಹಿಡಿದುದನ್ನು ನೋಡುತ್ತ ನಿಲ್ಲುವುದು ಪರಲೌಕಿಕವಾಗಿ ದೊಡ್ಡ ಪಾಪವೆನಿಸಿತು. ಹೀಗಾಗಿ ತುರುಸೆರೆ ಪ್ರಸಂಗದಲ್ಲಿ ಹೋರಾಡುವುದು ವ್ಯಕ್ತಿ ಜೀವನದ ಅದರಲ್ಲಿಯೂ ವೀರವ್ಯಕ್ತಿ ಜೀವನದ ಕರ್ತವ್ಯವೆನಿಸಿತು" ಎಂದಿದ್ದಾರೆ.

ತುರುಗಳನ್ನು ರಕ್ಷಣೆ ಮಾಡುವುದು, ಸ್ತ್ರೀಯರ ಮಾನ ರಕ್ಷಣೆ, ಊರಿನ ಪ್ರತಿಷ್ಠೆಯನ್ನು ಕಾಪಾಡುವುದು ವೀರರ ಪ್ರಮುಖ ಉದ್ದೇಶವಾಗಿತ್ತು. ತುರುಗಾಳಗದಲ್ಲಿ ಹೋರಾಟ ಮಾಡಿ ಮಡಿದ ವೀರರ ವೀರಗಲ್ಲುಗಳನ್ನು ಗುರುತಿಸುವುದು ಸುಲಭವಾಗಿದೆ. ಏಕೆಂದರೆ ಹೋರಾಟದ ಹಂತದಲ್ಲಿ ಯಾವುದಾದರೂ ಒಂದು ಭಾಗದಲ್ಲಿ ಹಸು ಅಥವಾ ದನಗಳ ಶಿಲ್ಪವಿರುತ್ತದೆ. ಇಂತಹ ಸ್ಮಾರಕಶಿಲ್ಪಗಳು ಸಿಂಧನೂರು ತಾಲೂಕಿನಲ್ಲಿ ಕಂಡುಬಂದಿವೆ. ಅವುಗಳನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

**ಊರು:** ಗೊಣ್ಣಿಗನೂರು

**ಸ್ಥಳ:** ಸರ್ಕಾರಿ ಪ್ರಾಥಮಿಕ ಶಾಲೆ ಆವರಣ

**ಅಳತೆ:** 1.5 ಅಡಿ ಅಗಲ x 2.1 ಅಡಿ ಎತ್ತರ

**ಅಭಿಮುಖ:** ಪಶ್ಚಿಮಾಭಿಮುಖ

**ಕಾಲ:** 11–12ನೇ ಶತಮಾನ **ಸ್ಥಿತಿ:** ಉತ್ತಮ

**ವಿವರಣೆ:** ಈ ವೀರಗಲ್ಲು ಮೂರು ಹಂತಗಳಿಂದ ಕೂಡಿದೆ.

ಗೊಣ್ಣಿಗನೂರು ಗ್ರಾಮವು ತಾಲೂಕು ಕೇಂದ್ರದಿಂದ 18 ಕಿ.ಮೀ. ಅಂತರದಲ್ಲಿದೆ. ಊರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ತುರುಗೋಳ್ ವೀರನಶಿಲ್ಪವು ಕಂಡುಬರುತ್ತದೆ. ಈ ಸ್ಮಾರಕವನ್ನು ಕಪ್ಪು ಶಿಲೆಯಲ್ಲಿ ಮೂರು ಹಂತಗಳಲ್ಲಿ ಕಂಡರಿಸಲಾಗಿದೆ. ಮೊದಲ ಹಂತದ ದೃಶ್ಯದಲ್ಲಿ ವೀರನನ್ನು ಪ್ರಧಾನವಾಗಿ ಚಿತ್ರಿಸಿದ್ದು, ಅವನು ಬಿಲ್ಲಿಗೆ ಬಾಣವನ್ನು ಹೂಡಿ ಹೋರಾಡುವ ಚಿತ್ರಣವಿದೆ. ವೈರಿಯನ್ನು ಮುಂದೆ ನಿರಾಯುಧನನ್ನಾಗಿ ಚಿತ್ರಿಸಿದ್ದಾರೆ. ಹೋರಾಟದಲ್ಲಿ ಒಬ್ಬ ಶತ್ರು ಮಡಿದಿರುವುದು ಕಂಡುಬರುತ್ತದೆ. ವೀರನ ಹಿಂಭಾಗದಲ್ಲಿ ನಾಲ್ಕು ಹಸುಗಳು ಸಾಲಾಗಿ ನಿಂತಿರುವಂತೆ ಕೆತ್ತಲಾಗಿದೆ. ಈ ಸ್ಮಾರಕಶಿಲ್ಪದ ವಿಶೇಷವೆಂದರೆ ಇಲ್ಲಿ ವೀರನು ಹಸುಗಳ ರಕ್ಷಣೆಗಾಗಿ ಹೋರಾಡಿ ಮಡಿದಿರುವುದು ಮಹೋನ್ನತವಾಗಿದೆ. ಎರಡನೆಯ ಹಂತದಲ್ಲಿ ವೀರನನ್ನು ಅಪ್ಸರೆಯರು ತಮ್ಮ ತೋಳಿನ ತೆಕ್ಕೆಯಲ್ಲಿ ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ಕೊನೆಯ ಹಂತದಲ್ಲಿ ವೀರನು ಅಂಜಲಿ ಮುದ್ರೆಯಲ್ಲಿ ಕುಳಿತಿರುವನು. ಅವನ ಎಡ ಬದಿಯಲ್ಲಿ ಶಿವಲಿಂಗವಿದೆ. ಇದರ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಕೆತ್ತನೆಗಳಿವೆ.

**ಊರು:** ಗೊಣ್ಣಿಗನೂರು

**ಸ್ಥಳ:** ಸರ್ಕಾರಿ ಪ್ರಾಥಮಿಕ ಶಾಲೆ ಆವರಣ

**ಅಳತೆ:** 2.11 ಅಡಿ ಅಗಲ x 2.4 ಅಡಿ ಎತ್ತರ

**ಅಭಿಮುಖ:** ಪಶ್ಚಿಮಾಭಿಮುಖ

**ಕಾಲ:** 11–12ನೇ ಶತಮಾನ

**ಸ್ಥಿತಿ:** ಉತ್ತಮ

**ವಿವರಣೆ:** ಈ ವೀರಗಲ್ಲು ಮೂರು ಹಂತಗಳಿಂದ ಕೂಡಿದೆ.

ಈ ಸ್ಮಾರಕ ಶಿಲ್ಪವನ್ನು ಬಿಳಿ ಕಣಶಿಲೆಯಲ್ಲಿ ಮೂರು ಹಂತಗಳಲ್ಲಿ ಕಂಡರಿಸಲಾಗಿದೆ. ಮೊದಲ ಹಂತದ ದೃಶ್ಯದಲ್ಲಿ ವೀರನನ್ನು ಪ್ರಧಾನವಾಗಿ ಚಿತ್ರಿಸಿದ್ದು, ಅವನು ಬಿಲ್ಲಿಗೆ ಬಾಣವನ್ನು ಹೂಡಿ ಹೋರಾಡುವ ಚಿತ್ರಣವಿದೆ. ವೈರಿಯೊಬ್ಬ ಬಿಲ್ಲಿಗೆ ಬಾಣವನ್ನು ಹೂಡಿ ಪ್ರತಿದಾಳಿ ಮಾಡಿರುವಂತೆ ಕಂಡರಿಸಲಾಗಿದೆ. ಹೋರಾಟದಲ್ಲಿ ಒಬ್ಬ ಶತ್ರು ಮಡಿದಿರುವುದು ಕಂಡುಬರುತ್ತದೆ. ವೀರನ ವೇಷಭೂಷಣವು ಗಮನ ಸೆಳೆಯುತ್ತದೆ. ವೀರನ ಹಿಂಭಾಗದಲ್ಲಿ ಎರಡು ಹಸುಗಳು ನಿಂತಿರುವಂತೆ ಕೆತ್ತಲಾಗಿದೆ.

ಈ ಸ್ಮಾರಕ ಶಿಲ್ಪದಲ್ಲಿ ವೀರನ ಬೆನ್ನಿಗೆ ಮುಖ ಮಾಡಿ ಹಸುಗಳು ನಿಂತಿವೆ. ಇದರಿಂದ ಇವುಗಳನ್ನು ಅಪಹರಿಸುವ ಸಂದರ್ಭದಲ್ಲಿ ವೀರನು ಇವುಗಳನ್ನು ತಡೆದು ಶತ್ರುವಿನ ಕಡೆ ಬಾಣವನ್ನು ಪ್ರಯೋಗಿಸುತ್ತಿದ್ದಾನೆ. ಎರಡನೆಯ ಹಂತದಲ್ಲಿ ವೀರನನ್ನು ಅಪ್ಸರೆಯರು ತಮ್ಮ ತೋಳಿನ ತೆಕ್ಕೆಯಲ್ಲಿ ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ಕೊನೆಯ ಹಂತದಲ್ಲಿ ವೀರನು ಅಂಜಲಿ ಮುದ್ರೆಯಲ್ಲಿ ಕುಳಿತಿರುವನು. ಅವನ ಬಲ ಬದಿಯಲ್ಲಿ ಯತಿಯು ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸುತ್ತಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಕೆತ್ತನೆಗಳಿವೆ.

**ಊರು:** ಗೊಣ್ಣಿಗನೂರು

**ಸ್ಥಳ:** ಸರ್ಕಾರಿ ಪ್ರಾಥಮಿಕ ಶಾಲೆ ಆವರಣ

**ಅಳತೆ :** 2.5 ಅಡಿ ಅಗಲ x 1.5 ಅಡಿ ಎತ್ತರ

**ಅಭಿಮುಖ:** ಪಶ್ಚಿಮಾಭಿಮುಖ

**ಕಾಲ:** 11–12ನೇ ಶತಮಾನ, **ಸ್ಥಿತಿ:** ಉತ್ತಮ



ಈ ಸ್ಮಾರಕ ಶಿಲ್ಪವನ್ನು ಕಪ್ಪು ಕಣಶಿಲೆಯಲ್ಲಿ ಮೂರು ಹಂತಗಳಲ್ಲಿ ಕಂಡರಿಸಲಾಗಿದೆ. ಆದರೆ ಅದರ ಮೇಲ್ಭಾಗದ ಎರಡು ಹಂತಗಳು ತುಂಡಾಗಿದೆ. ಮೊದಲ ಹಂತದ ದೃಶ್ಯದಲ್ಲಿ ವೀರನನ್ನು ಪ್ರಧಾನವಾಗಿ ಚಿತ್ರಿಸಿದ್ದು, ವೀರನು ಬಿಲ್ಲಿಗೆ ಬಾಣವನ್ನು ಹೂಡಿ ಹೋರಾಡುತ್ತಿರುವ ಚಿತ್ರಣವಿದೆ. ವೈರಿಯೊಬ್ಬ ಬಿಲ್ಲಿಗೆ ಬಾಣವನ್ನು ಹೂಡಿ ಪ್ರತಿದಾಳಿ ಮಾಡಿರುವಂತೆ ಕಂಡರಿಸಲಾಗಿದೆ. ವೀರನ ಹಿಂಭಾಗದಲ್ಲಿ ನಾಲ್ಕು ಹಸುಗಳು ನಿಂತಿರುವಂತೆ ಕೆತ್ತಲಾಗಿದೆ. ಇದರ ಮೇಲ್ಭಾಗವು ತುಂಡಾಗಿದೆ.

**ಊರು:** ಗೊಣ್ಣಿಗನೂರು

**ಸ್ಥಳ:** ಸರ್ಕಾರಿ ಪ್ರಾಥಮಿಕ ಶಾಲೆ ಆವರಣ

**ಅಳತೆ :** 2.5 ಅಡಿ ಅಗಲ x 3 ಅಡಿ ಎತ್ತರ

**ಅಭಿಮುಖ:** ಪಶ್ಚಿಮಾಭಿಮುಖ

**ಕಾಲ:** 11–12ನೇ ಶತಮಾನ, **ಸ್ಥಿತಿ:** ಉತ್ತಮ

**ವಿವರಣೆ:** ಈ ವೀರಗಲ್ಲು ಮೂರು ಹಂತಗಳಿಂದ ಕೂಡಿದೆ.



ಈ ಸ್ಮಾರಕ ಶಿಲ್ಪವನ್ನು ಬಿಳಿ ಕಣಶಿಲೆಯಲ್ಲಿ ಮೂರು ಹಂತಗಳಲ್ಲಿ ಕಂಡರಿಸಲಾಗಿದೆ. ಮೊದಲ ಹಂತದ ದೃಶ್ಯದಲ್ಲಿ ವೀರನನ್ನು ಪ್ರಧಾನವಾಗಿ ಚಿತ್ರಿಸಿದ್ದು, ಅವನು ಬಲಗೈಯಲ್ಲಿ ಬಾಣ ಎಡಗೈಯಲ್ಲಿ ಬಿಲ್ಲು ಹಿಡಿದು ಹೋರಾಡುವ ಚಿತ್ರಣವಿದೆ. ವೈರಿಯೊಬ್ಬ ಎಡಗೈಯಲ್ಲಿ ಬಿಲ್ಲು ಬಲಗೈಯಲ್ಲಿ ಬಾಣವನ್ನು ಹೂಡಿ ಪ್ರತಿದಾಳಿ ಮಾಡಿರುವಂತೆ ಕಂಡರಿಸಲಾಗಿದೆ. ವೀರನ ಹಿಂಭಾಗದಲ್ಲಿ ಎರಡು ಹಸುಗಳು ನಿಂತಿರುವಂತೆ ಕೆತ್ತಲಾಗಿದೆ.

ಎರಡನೆಯ ಹಂತದಲ್ಲಿ ವೀರನು ಕುಳಿತಿರುವಂತೆ ಚಿತ್ರಿಸಿ ವೀರನನ್ನು ಅಪ್ಸರೆಯರು ತಮ್ಮ ತೋಳ್ ತೆಕ್ಕೆಯಲ್ಲಿ ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ಕೊನೆಯ ಹಂತದಲ್ಲಿ ವೀರನು ಅಂಜಲಿ ಮುದ್ರೆಯಲ್ಲಿ ಕುಳಿತಿರುವನು. ಅವನ ಬಲ ಬದಿಯಲ್ಲಿ ಯತಿಯು ನಿಂತಿದ್ದು ಅವನು ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸುತ್ತಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಕೆತ್ತನೆಗಳಿವೆ.

**ಊರು:** ರಾಗಲಪರ್ವಿ **ಸ್ಥಳ:** ಪಾತಪ್ಪನ ಕಟ್ಟೆ

**ಅಳತೆ:** 2 ಅಡಿ ಅಗಲ x 2.5 ಅಡಿ ಎತ್ತರ

**ಅಭಿಮುಖ:** ಪೂರ್ವಾಭಿಮುಖ

**ಕಾಲ:** 11–12ನೇ ಶತಮಾನ, **ಸ್ಥಿತಿ:** ಉತ್ತಮ

**ವಿವರಣೆ:** ಈ ವೀರಗಲ್ಲು ಮೂರು ಹಂತಗಳಿಂದ ಕೂಡಿದೆ.



ರಾಗಲಪರ್ವಿ ಗ್ರಾಮವು ತಾಲೂಕು ಕೇಂದ್ರದಿಂದ 28 ಕಿ.ಮೀ. ದೂರದಲ್ಲಿದೆ. ಗ್ರಾಮದ ಪಾತಪ್ಪನ ಕಟ್ಟೆಯ ಬಳಿ ಈ ತುರುಗೋಳ್ ವೀರಗಲ್ಲು ಕಂಡುಬರುತ್ತದೆ. ಇದನ್ನು ಕಪ್ಪುಶಿಲೆಯಲ್ಲಿ ಮೂರು ಹಂತಗಳಲ್ಲಿ ಕಂಡರಿಸಲಾಗಿದೆ. ಮೊದಲ ಹಂತದಲ್ಲಿ ವೀರನು ಬಲಗೈಯಲ್ಲಿ ಬಿಲ್ಲು ಎಡಗೈಯಲ್ಲಿ ಬಾಣವನ್ನು ಹಿಡಿದುಕೊಂಡು ನಿಂತಿದ್ದಾನೆ. ಶಿರಮುಡಿ ಕಟ್ಟಿದ್ದು, ಕರ್ಣಕುಂಡಲಗಳು ಕೆಳಗೆ ಜೊತು ಬಿದ್ದಿವೆ. ಮುಂದೆ ವೈರಿಯ ಕಡೆ ಬಾಣವನ್ನು ಬಿಡುವ ರೀತಿಯಲ್ಲಿ ಚಿತ್ರಿಸಲಾಗಿದೆ. ವೈರಿಯ ಎದೆಗೆ ಬಾಣ ನಟ್ಟಿರುವುದರಿಂದ ಅವನು ಕೆಳಗೆ ಬೀಳುತ್ತಿದ್ದಾನೆ. ವೀರನು ವೀರಗಚ್ಚೆಯನ್ನು ಧರಿಸಿದ್ದು, ಸೊಂಟದಲ್ಲಿ ಕತ್ತಿಯನ್ನು ಸಹ ಇಟ್ಟುಕೊಂಡಿದ್ದಾನೆ. ವೀರನ ಹಿಂಭಾಗದಲ್ಲಿ ನಾಲ್ಕು ಹಸುಗಳನ್ನು ಸಾಲಾಗಿ ಕೆತ್ತಿದ್ದಾರೆ.

ಎರಡನೆಯ ಹಂತದಲ್ಲಿ ವೀರನ ತೋಳ್‌ಗಳಲ್ಲಿ ಅಪ್ಸರೆಯರು ಕೈ ಹಾಕಿದ್ದಾರೆ, ವೀರನು ತನ್ನ ಕೈಗಳನ್ನು ಅಪ್ಸರೆಯ ಹೆಗಲ ಮೇಲೆ ಕೈ ಹಾಕಿದ್ದು ಅವನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಕೊನೆಯ ಹಂತದಲ್ಲಿ ವೀರನು ಅಂಜಲಿ ಮುದ್ರೆಯಲ್ಲಿ ಕುಳಿತಿರುವನು. ಅವನ ಎಡ ಬದಿಯಲ್ಲಿ ಯತಿಯು ಶಿವಲಿಂಗಕ್ಕೆ ಪೂಜೆಯನ್ನು ಸಲ್ಲಿಸುತ್ತಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಕೆತ್ತನೆಗಳಿವೆ.

**ಊರು:** ಬಾದರ್ಲಿ

**ಸ್ಥಳ:** ಆಂಜನೇಯ ದೇವಾಲಯ

**ಅಳತೆ:** 1.11 ಅಡಿ ಅಗಲ x 3.8 ಅಡಿ ಎತ್ತರ

**ಅಭಿಮುಖ:** ಉತ್ತರಾಭಿಮುಖ

**ಕಾಲ:** 11–12ನೇ ಶತಮಾನ

**ಸ್ಥಿತಿ:** ಉತ್ತಮ

**ವಿವರಣೆ:** ಈ ವೀರಗಲ್ಲು ಮೂರು ಹಂತಗಳಿಂದ ಕೂಡಿದೆ.




ಮೊದಲೆನೆಯ ಹಂತದಲ್ಲಿ ವೀರನು ಬಲಭಾಗದಲ್ಲಿರುವನು. ಅವನು ಬಲಗೈಯಲ್ಲಿ ಬಿಲ್ಲನ್ನು ಹಿಡಿದುಕೊಂಡು, ಎಡಗೈಯಲ್ಲಿ ಬತ್ತಳಿಕೆಯಲ್ಲಿರುವ ಬಾಣವನ್ನು ತೆಗೆದುಕೊಂಡು ಶತ್ರು ಪಡೆಯ ಮೇಲೆ ಪ್ರಯೋಗಿಸುತ್ತಿರುವನು. ಎಡಭಾಗದಲ್ಲಿರುವ ವೈರಿಯು ವೀರನ ಕಡೆ ಪ್ರತಿದಾಳಿಯನ್ನು ನಡೆಸಿದ್ದಾರೆ. ವೀರನ ಹಿಂಭಾದಲ್ಲಿ ತುರುಗಳ ಚಿತ್ರವಿದೆ. ಎದುರಾಳಿಯಿಂದ ತುರುಗಳ ರಕ್ಷಣೆಯನ್ನು ಮಾಡುತ್ತಿದ್ದು ವೀರಾವೇಶದಿಂದ ಹೋರಾಡುತ್ತಿದ್ದಾನೆ. ಎರಡನೆಯ ಹಂತದಲ್ಲಿ ವೀರನು ಈ ಹೋರಾಟದಲ್ಲಿ ಮಡಿದಿದ್ದು ಅಪ್ಸರೆಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ವೀರನು ಅವರ ಹೆಗಲ ಮೇಲೆ ಕೈಹಾಕಿರುವನು. ಮೂರನೆಯ ಹಂತದಲ್ಲಿ ವೀರನು ಶಿವಲಿಂಗದ ಮುಂದೆ ಪದ್ಮಾಸನದಲ್ಲಿ ಕುಳಿತು ಧ್ಯಾನ ಮಾಡುತಿದ್ದಾನೆ. ಶಿವಲಿಂಗಕ್ಕೆ ಯತಿಯು ಪೂಜೆಯನ್ನು ಸಲ್ಲಿಸುತ್ತಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ.

ಒಟ್ಟಾರೆಯಾಗಿ ತುರುಗೊಳ್ ವೀರಗಲ್ಲುಗಳು ಪ್ರಾಚೀನ ಕಾಲದಲ್ಲಿ ತುರುಗಳ ರಕ್ಷಣೆಗಾಗಿ ಹೋರಾಟ ಮಾಡಿ ಪ್ರಾಣ ಕೊಟ್ಟವರ ಸಂಕೇತಗಳಾಗಿವೆ. ಅತ್ಯುತ್ತಮವಾದ ಶಿಲ್ಪಗಳುಳ್ಳ ಹಲವಾರು ತುರುಗೊಳ್ ಶಾಸನಗಳು ನೆಲದಲ್ಲಿ ಹೂತುಹೋಗಿವೆ. ಒಡೆದು ಚೂರಾಗಿವೆ. ದೇವಾಲಯಗಳು ಕುಸಿದು ಬಿದ್ದಾಗ, ಅದರಡಿ ಸಿಲುಕಿವೆ. ಎಷ್ಟೊ ಸ್ಮಾರಕಗಳು ತುಂಡಾಗಿವೆ. ಇವುಗಳ ಮೇಲೆ ಗಿಡಗಳು ಬೆಳೆದಿವೆ. ಎಷ್ಟೋ ಸ್ಥಳಗಳಲ್ಲಿ ಇವುಗಳನ್ನು ಮುಟ್ಟಲೂ ಹೆದರುತ್ತಾರೆ. ಕಾರಣ ಅವು ದೇವರ ಕಲ್ಲುಗಳು, ಅವುಗಳನ್ನು ಮುಟ್ಟಬಾರದು, ಕದಲಿಸಬಾರದು ಎಂಬ ನಂಬಿಕೆ. ಹೀಗಾಗಿ ಅವು ನೆಲಕ್ಕೆ ಬಿದ್ದಿದ್ದರೂ ಕೂಡ ಎತ್ತಿ ನಿಲ್ಲಿಸುವುದಿಲ್ಲ. ಅವುಗಳ ಮೇಲೆ ಮರಗಳು ಬೆಳೆದಿದ್ದರೂ ಕೂಡ ಅದರ ಬಳಿ ಸುಳಿಯುವುದಿಲ್ಲ. ಇಂತಹ ನಿರ್ಲಕ್ಷ್ಯದಿಂದಾಗಿ ಈವರೆಗೆ ಉಳಿದುಬಂದಿರುವ ತುರುಗೊಳ್ ವೀರಗಲ್ಲುಗಳು ಕಣ್ಮರೆಯಾಗತೊಡಗಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳು ಇವುಗಳ ಸಂರಕ್ಷಣೆಗೆ ಮುಂದಾಗಬೇಕಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಚಿದಾನಂದಮೂರ್ತಿ, ಎಂ. (2020). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನ ಬುಕ್‌ಹೌಸ್.
- ಕಲಬುರ್ಗಿ, ಎಂ.ಎಂ. (1980). *ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು.* ಐಬಿಹೆಚ್ ಪ್ರಕಾಶನ.
- ಪರಮಶಿವಮೂರ್ತಿ, ಡಿ.ವಿ. (2011). *ತುರುಗೊಳ್ ಸಂಕಥನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ವಾಸುದೇವನ್, ಸಿ.ಎಸ್. (2012). *ಕರ್ನಾಟಕ ದೇವಾಲಯ ಕೋಶ ರಾಯಚೂರು ಜಿಲ್ಲೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.